**ST JOSEPH'S UNIVERSITY, BENGALURU -27**
**BA/BSW/BSC/BCA/BCOM/BBA (INTRODUCTORY KANNADA)**
**IV SEMESTER**
**SEMESTER EXAMINATION: APRIL 2024**
**(Examination conducted in May / June 2024)**
**KAI- 422 – INTRODUCTORY KANNADA**
**(For current batch students only)**

**Time: 2 Hours** **Max Marks: 60**

**This paper contains 4 printed pages and 4 parts**

---

**NOTE: THIS QUESTION PAPER CONTAINS 4 PRINTED PAGES AND FOUR PARTS**

## PART –A

**Answer any Ten of the following questions** **10X1=10**

1. Write any two district Name in Kannada words
2. Write 'Seventy Nine' in kannada words
3. Translate in English **'ಎಂಬತ್ತೊಂಬತ್ತು'**
4. Write tense of this word **'ಹೋಗುವನು'** in kannada words
5. Write a sentence For Past Tense.
6. ಅವನು ಓಡುತ್ತಿದ್ದಾನೆ. write gender of this sentence.
7. Write a sentence for Nutor gender in kannada words.
8. ಕೋಳಿಯು ಎಲ್ಲಿ ವಾಸವಾಗಿತ್ತು?
9. Which book are you reading? Translate this sentence to Kannada .
10. ಈ ಸಂಜೆ ನಾನು ನಿನಗೆ ಫೋನ್ ಮಾಡಲೆ? Translate this sentence to English.
11. Make your own sentence in Kannada using the word **'Forest'**
12. ಯಾವ ಕಲ್ಲು ಸುಂದರ ಮೂರ್ತಿಯಾಯಿತು?

## PART – B

**Answer any Five of the Following Questions** **5X2=10**

13. Write Numbers in Kannada words 77 to 86
14. Write any six districts in Kannada words.
15. Write any six present tense words in Kannada.
16. Translate this sentence to Kannada
    a. He came from his Native place.
    b. Are you coming with me ?

17. Write Any Six Poets Name in Kannada words.
18. Write any six Kannada words from 'sahakara story' .

## PART –C

**Answer any Four of the Following Questions 4X5=20**

19. Write any 25 poets name in kannada .

20. Write any 25 Districts name in kannada words

21. Write Ten sentences in kannada using 'Future Tense'.

**Ex: ಅವನು ಪುಸ್ತಕವನ್ನು ಓದುವನು.**

22. **Answer the Following Questions**

1. ಶಿಲ್ಪಿಯು ತಂದ ಕಲ್ಲುಗಳು ಎಷ್ಟು?
2. ಶಿಲ್ಪಿ ಶಿಲ್ಪಿ ನನಗೆ ತುಂಬಾ ನೋವಾಗುತ್ತಿದೆ ಎಂದು ಹೇಳಿದವರು ಯಾರು?
3. ಶಿಲ್ಪಿಯು ಏನನ್ನು ನೋಡಿ ಆನಂದ ಪಟ್ಟನು?
4. ಶಿಲ್ಪಿಯು ಕಲ್ಲನ್ನು ಕೆತ್ತಲು ಏನನ್ನು ಬಳಸಿದನು?
5. ಮೊದಲನೆಯ ಕಲ್ಲು ಶಿಲ್ಪಿಗೆ ಏನೆಂದು ಹೇಳಿತು?

**23. Write any Ten sentences in kannada words.**

## PART -D

**Answer any two of the following Questions 2X10=20**

**24. Answer the Following Questions**

1. ಯಾವ ಊರಿನಲ್ಲಿ ಒಂದು ತೋಟವಿತ್ತು?
2. ತೋಟದಲ್ಲಿ ಯಾವ ಪಕ್ಷಿಗಳು ವಾಸವಾಗಿದ್ದವು?
3. ಕೋಳಿಯು ತೆನೆಗಳನ್ನು ಕೊಯ್ಯಲು ಮೊದಲು ಯಾರ ಸಹಾಯವನ್ನು ಕೇಳಿತು?
4. ಯಾವ ಪಕ್ಷಿಗಳಿಗೆ ಹಸಿವಾಯಿತು?
5. ನಿಮಗೆ ಏಕೆ ರಾಗಿ ಕೊಡಲಿ ಎಂದು ಯಾವ ಪಕ್ಷಿ ಕೇಳಿತು?
6. ರಾಗಿಯ ಪೈರುಗಳು ಏನನ್ನು ಬಿಟ್ಟವು?
7. ಕೋಳಿ ಮರಿಗಳನ್ನು ಕೂಡಿಕೊಂಡು ಏನನ್ನು ಸಂಗ್ರಹಿಸಿತು?
8. ತಮ್ಮ ತಪ್ಪನ್ನು ಯಾವ ಪಕ್ಷಿಗಳು ತಿಳಿದುಕೊಂಡವು?
9. ಕೋಳಿಗೆ ಗುಬ್ಬಚ್ಚಿ ಮತ್ತು ಪಾರಿವಾಳವನ್ನು ನೋಡಿ ಏನು ಅನಿಸಿತು?
10. ಕೋಳಿ ಪಾರಿವಾಳ ಮತ್ತು ಗುಬ್ಬಚ್ಚಿಗೆ ಏನನ್ನು ಕೊಟ್ಟಿತು?

**25. Write six sentences for each Tenses(present, past, Future)**

**26. Read the Passage and answer the Following questions**

**ಗೆಳೆತನ ಸಹಬಾಳ್ವೆಗೆ ಸೋಪಾನ:**

ಕುದುರೆ ಮತ್ತು ಒಂಟೆ ಒಳ್ಳೆಯ ಗೆಳೆಯರಾಗಿದ್ದವು. ಒಂದೇ ಕಡೆ ವಾಸಿಸುತ್ತಿದ್ದವು. ಜೊತೆಯಾಗಿಯೇ ಆಹಾರ ಹುಡುಕಿ ತಿನ್ನುತ್ತಿದ್ದವು. ಒಮ್ಮೆ ಕುದುರೆಗೆ ಒಂದು ಆಲೋಚನೆ ಬಂದಿತು. "ನಮ್ಮಿಬ್ಬರಲ್ಲಿ ಯಾರು ಹೆಚ್ಚು"? ಎಂದು ಒಂಟೆಯನ್ನು ಕೇಳಿತು. ಅದಕ್ಕೆ ಒಂಟಿ "ಕುದುರೆಯಣ್ಣ, ನಾವಿಬ್ಬರೂ ಸಮಾನರು ಅಲ್ಲವೆ?" ಎಂದು ಹೇಳಿತು. ಆ ಮಾತಿನಿಂದ ಕುದುರೆಗೆ ಸಮಾಧಾನವಾಗಲಿಲ್ಲ. ಆಗ ಅದು "ಆನೆಯಣ್ಣ ಅಲ್ಲಿದ್ದಾನೆ. ಅವನನ್ನೇ ಕೇಳೋಣ ಬಾ" ಎಂದಿತು. ಒಂಟೆ ಒಪ್ಪಿಕೊಂಡಿತು.

ಅವು ಆನೆಯ ಬಳಿಗೆ ಹೋದವು. ಕುದುರೆಯು "ಆನೆಯಣ್ಣ, ನಮ್ಮಿಬ್ಬರಲ್ಲಿ ಯಾರು ಹೆಚ್ಚು ಎಂದು ನೀನು ಹೇಳಬೇಕು" ಎಂದು ಕೇಳಿತು. ಆನೆಯು ಸ್ವಲ್ಪ ಹೊತ್ತು ಆಲೋಚಿಸಿ "ತಮ್ಮಂದಿರಾ, ಯಾರು ಹೆಚ್ಚು ಎಂದು ಸುಮ್ಮನೆ ಹೇಳುವುದು ಸರಿಯಲ್ಲ. ನಿಮ್ಮಿಬ್ಬರಿಗೆ ಓಟದ ಸ್ಪರ್ಧೆ ಏರ್ಪಡಿಸೋಣ. ಆದರೆ ಸ್ಪರ್ಧೆಯು ಎರಡು ಸಲ ಇರಲಿ. ಅನಂತರ ತೀರ್ಮಾನಿಸೋಣ" ಎಂಬ ಸಲಹೆಯನ್ನು ನೀಡಿತು. ಸ್ನೇಹಿತರಿಬ್ಬರೂ ಒಪ್ಪಿಕೊಂಡರು.

ಆನೆಯು ಸ್ಪರ್ಧೆಯ ಜಾಗ ಮತ್ತು ಸಮಯವನ್ನು ನಿರ್ಧರಿಸಿತು. "ನೀವು ಈ ಬೇವಿನ ಮರದಿಂದ ಆರಂಭಿಸಿ, ಆ ಕೊಳದವರೆಗೆ ಓಡಿ. ನಾನು ಕೊಳದ ಹತ್ತಿರ ಇರುತ್ತೇನೆ" ಎಂಬ ಸೂಚನೆ
ನೀಡಿತು. ಆನೆಯು ಅಲ್ಲಿಗೆ ಹೋಯಿತು. ಕುದುರೆ ಮತ್ತು ಒಂಟೆ ಓಡಲು ಶುರು ಮಾಡಿದವು. ಕುದುರೆಯೇ ವೇಗವಾಗಿ ಓಡಿ ಮೊದಲು ಗುರಿ ಮುಟ್ಟಿತು. ಗೆದ್ದ ಕುದುರೆ "ನೋಡಿದಿರಾ! ನಾನೇ ಹೆಚ್ಚು ಅಂತ ಗೊತ್ತಾಯಿತೆ?" ಎಂದು ಜಂಬದಿಂದ ಹೇಳಿತು. ಆನೆಯು "ಕುದುರೆಯೇ, ನಮ್ಮ ಒಪ್ಪಂದದಂತೆ ಇನ್ನೊಂದು ಕಡೆ ಸ್ಪರ್ಧೆ ಇದೆ. ಅದೂ ಆಗಲಿ, ಅನಂತರ ಯಾರು ಹೆಚ್ಚು ಎಂಬುದನ್ನು ತೀರ್ಮಾನಿಸಬಹುದು" ಎಂದಿತು. "ಓಹೋ! ಹಾಗೆಯೇ ಆಗಲಿ, ನಾನು ಸಿದ್ಧ* ಎಂದು ಕುದುರೆ ಹೆಮ್ಮೆಯಿಂದ ಹೇಳಿತು.

ಆನೆಯು ಎರಡನೆಯ ಸಲದ ಓಟದ ಸ್ಪರ್ಧೆಯನ್ನು ಹೆಚ್ಚು ಮರಳು ಇರುವ ಜಾಗದಲ್ಲಿ ಏರ್ಪಡಿಸಿತು. ಅಲ್ಲಿ ಸ್ಪರ್ಧೆಯ ಆರಂಭ ಮತ್ತು ಗುರಿ ಮುಟ್ಟುವ ಜಾಗಗಳನ್ನು ಗುರುತಿಸಿತು. ಗುರಿ ಮುಟ್ಟಬೇಕಾದ ಸ್ಥಳದಲ್ಲಿ ಆನೆಯು ನಿಂತಿತು. ಓಟದ ಸ್ಪರ್ಧೆ ಪ್ರಾರಂಭವಾಯಿತು. ಮರಳಿನ ಮೇಲೆ ಒಂಟಿ ಸರಾಗವಾಗಿ ಓಡಿತು. ಆದರೆ ಅಲ್ಲಿ ಕುದುರೆಗೆ ಓಡಲು ಕಷ್ಟವಾಯಿತು.

ಎರಡನೆಯ ಸಲ ಓಟದ ಸ್ಪರ್ಧೆಯಲ್ಲಿ ಒಂಟೆ ಗೆದ್ದಿತು. ಆಗ ಸೋತ ಕುದುರೆಗೆ ತನ್ನ ತಪ್ಪಿನ ಅರಿವಾಯಿತು. ಆನೆ ಮತ್ತು ಒಂಟೆಯ ಹತ್ತಿರ ಕ್ಷಮೆ ಕೇಳಿತು. ಆನೆಯು "ತಮ್ಮಂದಿರಾ, ನಿಮ್ಮಲ್ಲಿ ಯಾರು ಹೆಚ್ಚ ಅಲ್ಲ, ಕಡಿಮೆಯೂ ಅಲ್ಲ. ಪ್ರತಿಯೊಬ್ಬರಲ್ಲಿಯೂ ಅವರದೇ ಆದ ವಿಶೇಷತೆ ಇರುತ್ತದೆ.

ನೀವಿಬ್ಬರೂ ಒಳ್ಳೆಯ ಗೆಳೆಯರಾಗಿದ್ದವರು. ಮುಂದೆಯೂ ಹಾಗೆಯೇ ಇರಿ. ಗೆಳೆತನದ ಆನಂದವನ್ನು ಹಂಚಿಕೊಂಡು ಬಾಳಿರಿ" ಎಂದು ಹೇಳಿತು. ಕುದುರೆ ಮತ್ತು ಒಂಟೆ ಆನೆಗೆ ಧನ್ಯವಾದಗಳನ್ನು ತಿಳಿಸಿದವು. ಎಂದಿನಂತೆ ಗೆಳೆಯರಾಗಿ ಖುಷಿಯಾಗಿದ್ದವು.

1. ಒಳ್ಳೆಯ ಗೆಳೆಯರು ಯಾರು?
2. ಕುದುರೆಯು ನಮ್ಮಿಬ್ಬರಲ್ಲಿ ಯಾರು ಹೆಚ್ಚು ಎಂದು ಯಾರನ್ನು ಕೇಳಿತು?
3. ಕುದುರೆ ಮತ್ತು ಒಂಟೆ ಯಾರ ಬಳಿ ಹೋದವು?
4. ಕುದುರೆ ಮತ್ತು ಒಂಟೆಯ ನಡುವೆ ಯಾವ ಸ್ಪರ್ಧೆ ನಡೆಯುತ್ತದೆ?
5. ಮೊದಲ ಓಟದಲ್ಲಿ ಗೆದ್ದ ಪ್ರಾಣಿ ಯಾವುದು?
6. ಆನೆಯು ಎರಡನೇ ಓಟದ ಸ್ಪರ್ಧೆಯನ್ನು ಎಲ್ಲಿ ಏರ್ಪಡಿಸಿತು?
7. ಎರಡನೆ ಸಲ ಓಟದ ಸ್ಪರ್ಧೆಯಲ್ಲಿ ಗೆದ್ದ ಪ್ರಾಣಿ ಯಾವುದು?
8. ಕುದುರೆಯು ಯಾರ ಬಳಿ ಕ್ಷಮೆ ಕೇಳಿತು?
9. ಆನೆಯು ಕುದುರೆ ಮತ್ತು ಒಂಟೆಗೆ ಹೇಳಿದ ಮಾತು ಏನು?
10. ಕುದುರೆ ಮತ್ತು ಒಂಟೆ ಯಾರಿಗೆ ಧನ್ಯವಾದ ಹೇಳಿದವು?

*******************